


# ಕಲ್ಪನಾ ಲೋಕ ಅತಿವಾಸ್ತವ ಜಗತ್ತು!

**ಕೆ. ಶಿವಲಿಂಗಪ್ಪ ಹಂದಿಹಾಳು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಹಶಿಕ್ಷಕ. ಅವರ 'ನೋಟ್ ಬುಕ್' ಕಥಾ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ 2025ರ 'ಬಾಲ ಸಾಹಿತ್ಯ ಪುರಸ್ಕಾರ' ಸಂದಿದೆ. ಪ್ರಶಸ್ತಿ ಸ್ವೀಕರಿಸಿದ ನಂತರ ತಮ್ಮ ಮನದ ಇಂಗಿತವನ್ನು 'ಸುಧಾ' ಜೊತೆ ಹಂಚಿಕೊಂಡಿದ್ದಾರೆ.**

■ **ರಾಘವೇಂದ್ರ ತೊಗರ್ಸಿ**

◆ **ಪುರಸ್ಕಾರವನ್ನು ಸ್ವೀಕರಿಸಿದ ಸಂದರ್ಭದ ಬಗ್ಗೆ ಏನು ಹೇಳುತ್ತೀರಿ?**

ದೆಹಲಿಗೆ ಪ್ರಶಸ್ತಿಯನ್ನು ಸ್ವೀಕರಿಸಲು ಹೋದಾಗ, ಉಳಿದ 23 ಭಾಷೆಗಳ ಲೇಖಕರನ್ನು ಭೇಟಿಯಾದಾಗ ನಾನೇ ಕಿರಿಯ ಎಂದೆನಿಸಿತು. ಕೆಲವರು 'ಚಿಕ್ಕ ವಯಸ್ಸಿಗೆ ಗೌರವ ಬಂದಿದೆ' ಎಂದು ಪ್ರಶಂಸಿಸಿ 'ಸಮರ್ಥವಾಗಿ ಇದನ್ನು ನಿಭಾಯಿಸಬೇಕು' ಎಂದರು. ನಾನು 20 ವರ್ಷಗಳಿಂದ ಮಕ್ಕಳ ಸಾಹಿತ್ಯದಲ್ಲಿ ಕೆಲಸ ಮಾಡುತ್ತಿದ್ದೇನೆ. ಅದನ್ನು ಗುರುತಿಸಿರುವುದು ಸಮಾಧಾನ ತಂದಿದೆ.

◆ **ಮಕ್ಕಳ ಸಾಹಿತ್ಯದಲ್ಲಿ ಶಿಕ್ಷಕರು ಹೆಚ್ಚು ಕಾಣಿಸುತ್ತಿದ್ದಾರೆ. ಏಕಿರಬಹುದು?**

ಮಕ್ಕಳ ಸಾಹಿತ್ಯ ಪರಂಪರೆಯನ್ನು ಮೂರು ಭಾಗ ಮಾಡಿ ನೋಡಬಯಸುವೆ. ಆರಂಭದಲ್ಲಿ ಜಿ.ಪಿ. ರಾಜರತ್ನಂ, ದಿನಕರ ದೇಸಾಯಿ, ಪಂಜೆ, ಕುವೆಂಪು ಶಿಕ್ಷಕರಾಗಿರಲಿಲ್ಲ. ನವ್ಯ ಕಾಲಘಟ್ಟದಲ್ಲಿ ಶಿಕ್ಷಕ ಸಮುದಾಯ ದೊಡ್ಡ ಮಟ್ಟದಲ್ಲಿ ತೊಡಗಿದರೂ ಗುಣಮಟ್ಟದಿಂದ ಅಷ್ಟು ಪ್ರಧಾನವಾಗಲಿಲ್ಲ. ಅದಾದ ಮೇಲೆ ಬೊಳುವಾರು, ಎಚ್.ಎಸ್.ವಿ, ಆನಂದ ಪಾಟೀಲ್, ಲಕ್ಷ್ಮೀನಾರಾಯಣ ಭಟ್ಟ, ನಾ. ಡಿಸೋಜ, ತಿರುಮಲೇಶ, ಸುಮತೀಂದ್ರ ನಾಡಿಗ ಮೊದಲಾದವರು ಮಕ್ಕಳ ಸಾಹಿತ್ಯದಲ್ಲಿ ತೊಡಗಿದ್ದರು. ಅವರೂ ಶಿಕ್ಷಕರಲ್ಲ. ಕಳೆದ ಎರಡು ದಶಕದಲ್ಲಿ ಶಿಕ್ಷಕರು ಹೆಚ್ಚಾಗಿ ತೊಡಗಿದ್ದಾರೆ. ಶೈಕ್ಷಣಿಕ ಉದ್ದೇಶ ಇಟ್ಟುಕೊಂಡು ಬರೆಯುವವರು ತೀರಾ ಕಡಿಮೆ. ತಮ್ಮಣ್ಣ ಬೀಗಾರ ಮಲೆನಾಡ ಬದುಕು ಕಟ್ಟಿಕೊಟ್ಟಿದ್ದಾರೆ. ನಾನೂ ಶಿಕ್ಷಕನಾಗಿ ನನ್ನ ಶಾಲೆಯ ಕಥೆಗಳನ್ನೇ ಹೇಳುತ್ತಿರಬಹುದು. ಆದರೆ ಶೈಕ್ಷಣಿಕ ಉದ್ದೇಶ ಕಥೆಗಳಿಗೆ ಇಲ್ಲ. ನನ್ನ ಭಾಗದ ತಳಸಮುದಾಯದ ಅವಕಾಶ ವಂಚಿತ ಮಕ್ಕಳನ್ನು ಸಾಹಿತ್ಯ ವಲಯಕ್ಕೆ ತರುವ ಪ್ರಯತ್ನ ಮಾಡಿದ್ದೇನೆ. ಈ ತಲೆಮಾರಿನಲ್ಲಿ ಬರೆಯುವ ನಾವು ಬಾಲ್ಯ ಅನ್ನುವುದನ್ನು ಪುನರ್ ನೆನಪು ಮಾಡಿಕೊಳ್ಳುತ್ತಿದ್ದೇವೆ ಹೊರತು ಸಾಹಿತ್ಯದ ಉದ್ದೇಶ ನಮ್ಮ ಎದುರು ಇರುವ ಮಕ್ಕಳಲ್ಲ.

◆ **ಮಕ್ಕಳ ಸಾಹಿತ್ಯವನ್ನು ದೊಡ್ಡವರು ಏಕೆ ಓದಬೇಕು?**

ಮಕ್ಕಳ ಸಾಹಿತ್ಯ ಕೂಡ ಸಾಹಿತ್ಯದ ಕಥೆ–ಕಾದಂಬರಿಯಂತೆ ಎಲ್ಲರೂ ಓದಬಹುದು. ಅದರ ಓದಿಗೆ ವಯಸ್ಸಿನ ಚೌಕಟ್ಟು ಇಲ್ಲ. ಮಕ್ಕಳ ಸಾಹಿತ್ಯದಲ್ಲಿ 'ಮಕ್ಕಳು' ಪದ ಇರುವುದರಿಂದ ತಪ್ಪಾಗಿ ಅರ್ಥ ಆಗುತ್ತದೆ. ಯಾರಲ್ಲಿ ಮಕ್ಕಳತನ ಇರುತ್ತದೆಯೋ ಅವರು ಮಕ್ಕಳ ಸಾಹಿತ್ಯ ಓದಬಹುದು. ಫ್ಯಾಂಟಸಿ ಜಗತ್ತನ್ನು ಆನಂದಿಸಲು ವಯಸ್ಸಿನ ಪರಿಮಿತಿ ಇಲ್ಲ. 'ಬಾಹುಬಲಿ' ಸಿನಿಮಾ ಫ್ಯಾಂಟಸಿ ಕಥೆ. ಅದನ್ನು ಎಲ್ಲರೂ ನೋಡುತ್ತೇವೆ. ಬಾಲ ಜಗತ್ತಿನ ಬಗ್ಗೆ ಕುತೂಹಲ ಇರುವ ಎಲ್ಲರೂ ಓದಬೇಕು. ಯಾವ ಕಾದಂಬರಿಕಾರನೂ ತನ್ನ ಓದುಗ ಹೇಗೆ ತೊಡಗಿಸಿಕೊಳ್ಳಬೇಕು ಎಂದು ಯೋಚಿಸಲ್ಲ. ಆದರೆ ಅದನ್ನು ಮಕ್ಕಳ ಸಾಹಿತ್ಯಕ್ಕೆ ತಳಕು ಹಾಕುತ್ತೇವೆ.

◆ **ಮಕ್ಕಳಲ್ಲಿ ಓದಿನ ಅಭಿರುಚಿ ಹುಟ್ಟಿಸಲು ತಂತ್ರಗಳು ಇವೆಯೇ?**

ಮಕ್ಕಳಲ್ಲಿ ಓದಿನ ಆಸಕ್ತಿ ಮೂಡಿಸಲು ಒಂದು ತಂತ್ರ ಮಾಡಿದ್ದೆ. ಗ್ರಂಥಾಲಯಕ್ಕೆ ಕರೆದುಕೊಂಡು ಹೋಗಿ ಸಾಕಷ್ಟು ಪುಸ್ತಕಗಳನ್ನು ಅವರ ಮುಂದೆ ಹರಡಿದೆ. ಓದಬೇಡಿ ಸುಮ್ಮನೆ ನೋಡಿ ಎಂದು ಸೂಚಿಸಿದೆ. ಹೀಗೆ ಮೂರು ನಾಲ್ಕು ಬಾರಿ ಆಯಿತು. ನಾಲ್ಕಾರು ವಿದ್ಯಾರ್ಥಿಗಳು ಓದಲು ಶುರುಮಾಡಿದರು. 5ರಿಂದ 8 ತರಗತಿ ಮಕ್ಕಳಿಗೆ ಈ ಪ್ರಯೋಗ ಮಾಡಿದ್ದೆ. ಒಂದು ಶನಿವಾರ 'ಒಂದು ಪುಸ್ತಕ ನಾಲ್ಕು ಮಾತು' ಎಂಬ ಕಾರ್ಯಕ್ರಮ ರೂಪಿಸಿ ಅವರು ಓದಿದ ಕಥೆಯನ್ನು ಹೇಳಿಸಿದೆ. ಅದರಿಂದ 400 ಮಕ್ಕಳಿಗೆ ಕಥೆ ಮುಟ್ಟಿತು. ಇದಾದ ಮೇಲೆ ಕೆಲ ಮಕ್ಕಳು ಕೇಳಿ ಓದಲು ಆರಂಭಿಸಿದರು.

◆ **ಮಕ್ಕಳ ಸಾಹಿತ್ಯ ಸ್ವರೂಪದಲ್ಲಿ ಫ್ಯಾಂಟಸಿ–ಪ್ರಾಸದ ಅಗತ್ಯದ ಬಗ್ಗೆ ಏನು ಹೇಳುತ್ತೀರಿ?**

ಮಗು ದೊಡ್ಡವರನ್ನು ಅನುಸರಿಸುತ್ತದೆ. ತನಗೆ ಸಾಧ್ಯ ಆಗದೆ ಇರುವುದನ್ನು ಫ್ಯಾಂಟಸಿ ಮೂಲಕ ಸಾಧ್ಯ ಮಾಡಿಕೊಳ್ಳುತ್ತದೆ. ಕಥೆಗಳು ಅದೇ ಕಾರಣಕ್ಕೆ ಹುಟ್ಟಿಕೊಂಡಿವೆ ಅನ್ನಿಸುತ್ತದೆ. ವಿಮಾನದಂತೆ ಹಾರಬೇಕು ಎನ್ನುವ ಆಸೆ ವಾಸ್ತವದಲ್ಲಿ ಸಾಧ್ಯವಿಲ್ಲ. ಕಥೆಯಲ್ಲಿ ಕಲ್ಪಿಸಿಕೊಳ್ಳಲು ಸಾಧ್ಯ. ಫ್ಯಾಂಟಸಿ ಮಕ್ಕಳಲ್ಲಿ ಅಸಾಧ್ಯವಾದ ಕನಸುಗಳನ್ನು ಈಡೇರಿಸಿಕೊಳ್ಳಲು ಬಳಸುವ ತಂತ್ರ. ಫ್ಯಾಂಟಸಿ ಅವಾಸ್ತವ ಅಲ್ಲ, ಅತಿವಾಸ್ತವ. ಪುಷ್ಪಕ ವಿಮಾನ ಅವತ್ತು ಫ್ಯಾಂಟಸಿ, ಇವತ್ತು ವಾಸ್ತವ. ಫ್ಯಾಂಟಸಿ ನಮ್ಮ ಕಾಲಕ್ಕಿಂತ ಸ್ವಲ್ಪ ದೂರದಲ್ಲಿ ಇರುತ್ತದೆ.

